> ‘ಅತ್ತೆ, ಗೋವಿಂದ ಅದೇನೋ ಫೇರ್ ಆ್ಯಂಡ್ ಲವ್ಲಿ ಅಂತ ತಂದುಕೊಟ್ಟಿದ್ನಲ್ಲ. ಅದನ್ನ ಹಚ್ತಾ ಇದ್ದೀಯಾ? ನಿನ್ನ ಮುಖದ ಕಲೆ ಎಲ್ಲ ಹೋಯ್ತಾ?’ ಎನ್ನುತ್ತಾ ಅತ್ತೆಯ ಮುಂಗುರುಳ ಅಡಿಯಲ್ಲಿರುವ ಕಲೆಗಳ ಬಗ್ಗೆ ಕೇಳತೊಡಗಿದಳು ನೀಲಿ...

ಕುದಿಯಲಿಡು. ನಾನು ತೋಟಕ್ಕೆ ಹೋಗಿ ಕಪ್ಪೆ ಹಿಡಿದು ತರ್ತೆ. ಕಪ್ಪೆ ಎಣ್ಣೆ ಮಾಡಿ ಹಚ್ಚಿದ್ರೆ ವಾರದಲ್ಲಿ ಕಡಿಮೆಯಾಗ್ಬಹುದು” ಎಂದವರೇ ಕಪ್ಪೆ ಹಿಡಿದು ತರಲು ತೋಟದ ಕಡೆಗೆ ನಡೆದರು.

ನೀಲಿಗೆ ಜೀವಂತ ಕಪ್ಪೆಯೊಂದು ಎಣ್ಣೆಯಲ್ಲಿ ಬೇಯುವ ದೃಶ್ಯ ಕಣ್ಮುಂದೆ ಬಂದು ಮನಸ್ಸಿಗೆ ಹಿಂಸೆಯೆನಿಸತೊಡಗಿತು. ಅಪ್ಪ ಕಥೆಯಲ್ಲಿ ಹೇಳಿದ್ದರು, ತಪ್ಪು ಮಾಡಿದವರನ್ನು ಸತ್ತನಂತರ ನರಕದಲ್ಲಿ ಕುದಿಯುವ ಎಣ್ಣೆಗೆ ಹಾಕುತ್ತಾರೆ ಎಂದು. ಬಹುಶಃ ಹಿಂದಿನ ಜನ್ಮದಲ್ಲಿ ರಾಶೀ ಪಾಪ ಮಾಡಿದ ಕಪ್ಪೆಯೇ ಇಂದು ದೊಡ್ಡಪ್ಪನ ಕೈಗೆ ಸಿಗುವುದೇನೋ ಎಂದು ಯೋಚಿಸತೊಡಗಿದಳು. ಕಣ್ಣಲ್ಲಿ ನೀರು ಸುರಿಸುತ್ತ ಕುಳಿತ ಕಿಟ್ಟಣ್ಣನ ಹತ್ತಿರ ಬಂದು, “ತುಂಬಾ ನೋವಾಗ್ತದಾ ಅಣ್ಣಾ?’’ ಎಂದು ಪ್ರೀತಿಯಿಂದ ಕೇಳಿದಳು. “ನೋವಾಗದೆ ಮತ್ತೆ? ಕತ್ತೆ ಲೌಡಿ ಅವಳು. ಅವಳು ಅವನ ಜೊತೆ ಎಲ್ಲೆಲ್ಲ ಬಿದ್ದುಕೊಂಡಿರೋದನ್ನ ನಾನು ನೋಡಿಲ್ವ? ಪಾಪ ಅಂತ ಸುಮ್ಮನಿದ್ರೆ ನಂಗೇ ಬರೆ ಹಾಕ್ತಾಳಲ್ವ? ಎಲ್ಲರ ಹತ್ತಿರ ಹೇಳ್ತೇನೆ ನೋಡು’’ ಎಂದು ಜೋರಾಗಿ ಕಿರುಚತೊಡಗಿದಾಗ, ಮತ್ತೆಲ್ಲಿಯಾದರೂ ಸರುಅತ್ತೆ ಕೇಳಿಸಿಕೊಂಡು ರಾಮಾಯಣವಾದ್ರೆ ಎನಿಸಿ, “ನೀನು ಸುಮ್ಮನಿರು. ಮಾತಾಡಿದ್ರೆ ನೋವು ಹೆಚ್ಚಾಗುತ್ತದೆ’’ ಎಂದು ಅವನ ಬಾಯಿ ಮುಚ್ಚಿದಳು.

ನೀಲಿಗೆ ಹಸಿವೆಯಾಗುತ್ತಿತ್ತು. ಸರುಅತ್ತೆ ಒಳಗಿನಿಂದಲೇ ಕರೆದಳು, “ನೀಲಿ ಊಟಕ್ಕೆ ಬಾ’’. ಯಾರ ಮನೆಯಲ್ಲಿ ಬೇಗ ಊಟಕ್ಕಾಗುವುದೋ ಅವರು ನೀಲಿಯನ್ನು ಕರೆಯುವುದು ವಾಡಿಕೆ. ನೀಲಿ ಊಟಕ್ಕೆ ನಡೆದಳು. ಅತ್ತೆ ಪ್ರೀತಿಯಿಂದ ಬಡಿಸುತ್ತ ಕೇಳಿದಳು, “ನೀಲಿ, ಹೇಳು ನಿಮ್ಮ ಪುಸ್ತಕದಲ್ಲಿ ಹಾಗೆಲ್ಲ ಬರೆದಿದೆಯಾ?’’ ನೀಲಿ, “ಹೇಗೆ?” ಎಂದಳು. “ಅದೇ ಆ ಲೌಡಿ ಓದ್ತಿದ್ದನಲ್ಲ. ಹಾಗೆ’’ ಎಂದಳು. ನೀಲಿ ನೆನಪಿಸಿಕೊಂಡು ನುಡಿದಳು, “ಹೌದತ್ತೆ, ಆದರೆ ಅದು ಅವನ ಪುಸ್ತಕದಲ್ಲಿಲ್ಲ. ಅವನ ಹಳೆಪುಸ್ತಕದಲ್ಲಿ ಸರೋಜಿನಿನಾಯ್ಡು ಎಂಬ ಪಾಠವಿದೆ. ಅದರಲ್ಲಿ ಸರೋಜಿನಿ ನಾಯ್ಡು ಅವರು ಗೋವಿಂದರಾಜು ಎಂಬವರೊಂದಿಗೆ ಮದುವೆಯಾದರು ಎಂದಿದೆ.’’ ಎಂದಳು. ಸರುಅತ್ತೆ ಕೋಪದಿಂದ, “ಅವನು ನನಗೆ ಟೊಂಟ್ ಕೊಡೋಕಂತಾನೇ ಹಾಗೆಲ್ಲ ಓದ್ತಾನೆ. ಇವರಿಗೆಲ್ಲ ಆ ಗೋವಿಂದ ನಮ್ಮನೆಗೆ ಬರೋದು ಕಣ್ಣಿಗೆ ಹೊಡೀತಾ ಇದೆ. ಆದರೆ ನಾನೇನು ಮಾಡಲಿ ಹೇಳು? ಈ ಮಳೆಗಾಲ ಕಳೆದ್ರೆ ನಾನು ಈ ಮನೇನ ಬಿಡಬೇಕು. ನಂಗೂ ಒಂದು ಮನೆ ಬೇಕಲ್ವಾ? ಅವ ನನಗೆ ಮನೆ ಕಟ್ಟಿಕೊಡ್ತಾನಂತ ಹೊಟ್ಟೆಕಿಚ್ಚು ಇವರಿಗೆ. ಅಪ್ಪನ ಆಸ್ತೀಲಿ ನಾನು ಪಾಲು ತೆಕೊಂಡೆ ನೋಡು, ಆಗಲೇ ಶುರುವಾಯ್ತು ಇವರ ಕಾಟ. ವಯಸ್ಸಿಗೆ ಸರಿಯಾಗಿ ಮದುವೆ ಮಾಡಿದ್ರೆ ನಾನೂ ಅಕ್ಕಂದಿರ ಹಾಗೆ ನಾಲ್ಕು ಹೆತ್ತು ಗಂಡನ ಮನೆಯಲ್ಲಿ ನೆಮ್ಮದಿಯಾಗಿ ಇರ್ತಿದ್ದೆ. ಇವರು ಅದನ್ನೂ ಮಾಡ್ಲಿಲ್ಲ. ಆ ಯಾವುದೋ ಜಾತಿಯ ಗಂಡಿಗಿರುವ ಕಾಳಜಿಯಾದ್ರೂ ಇವರಿಗೆ ಬೇಡವೆ? ಅವನೋ ನನ್ನ